ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಡಗು ಜಿಲ್ಲೆ, ಮಡಿಕೇರಿ-571201
**Office of the Deputy Commissioner, Kodagu District, Madikeri-571201**
ದೂರವಾಣಿ ಸಂ:08272-225500 ಫ್ಯಾಕ್ಸ್ ಸಂ:225900 E-Mail:-deo.kodagu@gmail.com Web: https://kodagu.nic.in

ದಿನಾಂಕ:24-05-2019

## ಪತ್ರಿಕಾ ಪ್ರಕಟಣೆ

ದಿನಾಂಕ: 23-05-2019 ರಂದು ಸುಮಾರು ರಾತ್ರಿ 8.30 ರ ಆಸುಪಾಸಿನಲ್ಲಿ ವಿರಾಜಪೇಟೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಗುಡುಗಿನ ಶಬ್ದದ ಜೊತೆ ಭೂಮಿ ಕಂಪಿಸಿರುವ ಬಗ್ಗೆ ಸ್ಥಳೀಯ ದಿನಪತ್ರಿಕೆ ಮತ್ತು ಸಾಮಾಜಿಕ ಜಾಲ ತಾಣಗಳಿಂದ ಮಾಹಿತಿ ಲಭ್ಯವಾಗಿರುತ್ತದೆ.

ಸದರಿ ವಿಷಯದ ಸೂಕ್ಷ್ಮತೆಯನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾಡಳಿತವು ಈ ಬಗ್ಗೆ ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರ (KSNDMC) ದಿಂದ ಮಾಹಿತಿಯನ್ನು ಪಡೆದಿರುತ್ತದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರದ ವರದಿಯು ಈ ಕೆಳಕಂಡಂತಿರುತ್ತದೆ.

- ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರದ 14 ಭೂಕಂಪನ ವೀಕ್ಷಣಾಲಯಗಳಿಂದ ಮಾಹಿತಿ ಪಡೆದು ಪರಿಶೀಲಿಸಲಾಗಿದ್ದು, ಯಾವುದೇ ಲಘು ಕಂಪನದ ಬಗ್ಗೆ ದಾಖಲೆ ಇರುವುದಿಲ್ಲ. ಬಹುಶ: ಇದು ಸ್ಥಳೀಯ ಕಂಪನವಾಗಿದ್ದು, ಬಹು ದೂರದವರೆಗೆ ವಿಸ್ತರಿಸಿರುವುದಿಲ್ಲ.
- ವರದಿಯಾಗಿರುವ ಕಂಪನದ ಪ್ರಮಾಣವು ತೀರಾ ಸಣ್ಣದಾಗಿದ್ದು, (1.0 ಕ್ಕಿಂತ ಕಡಿಮೆ) ತೀವ್ರತೆಯು ಕಡಿಮೆ ಇರುವುದರಿಂದ ಕಂಪನದ ಪ್ರಮಾಣವು ಹಾರಂಗಿ ಜಲಾಶಯದ ಆವರಣದಲ್ಲಿ ಅಳವಡಿಸಲಾಗಿರುವ ಭೂ ಕಂಪನ ವೀಕ್ಷಣಾಲಯದಲ್ಲೂ ಸಹ ಯಾವುದೇ ಮಾಹಿತಿ ದಾಖಲಾಗಿರುವುದಿಲ್ಲ
- ಕಂಪನದ ಪ್ರಮಾಣವು 1.0 ಕ್ಕಿಂತ ಕಡಿಮೆ ಇದ್ದಲ್ಲಿ ಯಾವುದೇ ಪ್ರಾಣ ಹಾನಿ ಹಾಗೂ ಆಸ್ತಿಪಾಸ್ತಿ ಹಾನಿ ಉಂಟಾಗುವುದಿಲ್ಲ.
- ಕಂಪನದ ತೀವ್ರತೆಯ ಪ್ರಮಾಣವು ಅತ್ಯಂತ ಕಡಿಮೆ ಇದ್ದು, ಸಾರ್ವಜನಿಕರು ಯಾವುದೇ ಆತಂಕ ಪಡುವ ಅಗತ್ಯವಿರುವುದಿಲ್ಲ.
- ಈ ರೀತಿಯ ಕಂಪನದ ಅನುಭವ ಉಂಟಾದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರದ ಟೋಲ್ ಫ್ರೀ ದೂರವಾಣಿ ಸಂಖ್ಯೆ: 08272-221077ಕ್ಕೆ ಕರೆ ಮಾಡಿ ಅಗತ್ಯ ನೆರವು ಪಡೆಯಬಹುದಾಗಿದೆ.
- ಜಿಲ್ಲಾಡಳಿತವು ಈ ರೀತಿಯ ಕಂಪನದ ಅನುಭವವಾದ ಸ್ಥಳಗಳ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಆರಕ್ಷಕ ಠಾಣೆ, ವಿದ್ಯುತ್ ಇಲಾಖಾ ಸಿಬ್ಬಂದಿ, ಅಗ್ನಿ ಶಾಮಕ ಸಿಬ್ಬಂದಿ ಮತ್ತು ಇತರೆ ಸಂಬಂಧಪಟ್ಟ ಇಲಾಖೆಗಳ ಸಿಬ್ಬಂದಿಗಳನ್ನು ಜಾಗೃತರಾಗಿರಿಸುವ ಮೂಲಕ ಇಂತಹ ತುರ್ತು ಸಂದರ್ಭ ಉಂಟಾದಲ್ಲಿ ಸಮರ್ಪಕವಾಗಿ ಸಾರ್ವಜನಿಕರಿಗೆ ಅಗತ್ಯ ನೆರವು/ಸಹಕಾರ ನೀಡಲು ಈಗಾಗಲೇ ಸೂಚನೆ ನೀಡಲಾಗಿರುತ್ತದೆ.

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.

Scanned by CamScanner